# ವಚನ ಸಾಹಿತ್ಯದ ಮೌಲ್ಯಗಳು

**ಪವಿತ್ರ ಎ.ವಿ.**

**ಅತಿಥಿ ಉಪನ್ಯಾಸಕರು**

**ಶ್ರೀಮತಿ ಇಂದಿರಾಗಾಂಧಿ ಮಹಿಳಾ ಕಾಲೇಜು ಸಾಗರ**

ಭಾರತೀಯ ಸಮಾಜದ ಅಧ್ಯಯನದ ಸಂದರ್ಭದಲ್ಲಿ ಸಾಹಿತ್ಯವು ಪ್ರಮುಖವಾದ ಪಾತ್ರವನ್ನು ನಿರ್ವಹಿಸಿದೆ. ಅಂದು ಜನಜೀವನದ ಬದುಕು ಬವಣೆಗಳು ಬಹುದುಸ್ತರವಾಗಿದ್ದವು. ವೈದಿಕ ಮತ್ತು ರಾಜಾಜ್ಞೆ ಇವು ನಿಯಂತ್ರಕ ಶಕ್ತಿಗಳಾಗಿ ತಳವೂರಿದ್ದವು. ಇವುಗಳ ವಿರುದ್ಧ ಮಾತನಾಡುವ, ಪ್ರತಿಭಟಿಸುವ ಗೋಜಿಗೆ ಹೋಗದೆ ತಮ್ಮ ಬದುಕನ್ನು ಸಾಗಿಸುತ್ತಿದ್ದರು. ಮೌಢ್ಯಾಚರಣೆಗಳು ಜನರನ್ನು ದಿಕ್ಕು ಬದಲಿಸುವ ಕಾರ್ಯಕ್ಕೆ ತೊಡಗುತ್ತಿದ್ದುವೇ ಹೊರತು ಪರಿವರ್ತನೆಯ ಮಾರ್ಗಸೂಚಿಗಳಾಗಿರಲಿಲ್ಲ. ಅಂದಿನ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕತೆಯ ಜೊತಗೆ ಧಾರ್ಮಿಕತೆ ನಂಟನ್ನು ಬಲಗೊಳಿಸಿಕೊಂಡಿತ್ತು. ಧರ್ಮ ವೆನ್ನುವುದು ಮೇಲ್ವರ್ಗದವರ ಸೊತ್ತಾಗಿ ಕೆಳವರ್ಗದವರ, ತುಳಿತಕ್ಕೆ ಒಳಗಾಗಿ ಅನಾದರಣೆಗೊಳಗಾದವರ ಏಳ್ಗೆಗೆ ತೊಡಕಾಗಿ ಪರಿಣಮಿಸಿತು. ಬದುಕಿನ ಘನ ಘೋರ ಯುದ್ಧಗಳು ಮನದೊಳಗೆ ಮಲಿನಗೊಂಡು ಮೌಲ್ಯಗಳಾಗಲು ತವಕಿಸುತ್ತಾ ಇದ್ದವು. ರಾಜ್ಯ-ಸಾಮ್ರಾಜ್ಯಗಳ ಉದಯಾಸ್ತಗಳು, ಯುದ್ಧಗಳು ಘೋರ ಪರಿಣಾಮಗಳು ಜನತೆಯ ಬದುಕನ್ನು ಬದಲಾಯಿಸಿದವು. ಈ ಬದುಕನ್ನು ಬದಲಾಯಿಸಲು ಮೇಲ್ವರ್ಗದ ಸಂಸ್ಕೃತ ಭಾಷೆಯೂ ಕೂಡ ಬಹಳ ತೊಡಕಾಗಿ ಪರಿಣಮಿಸಿತು. ಪೂರ್ವಜರ ಸಂಸ್ಕೃತ ಮಿಶ್ರಿತವಾದ ಕಾವ್ಯಗಳು ದೂರವುಳಿದು ಜನಸಾಮಾನ್ಯರಿಗೆ ಗಗನಕುಸುಮವಾಗಿತ್ತು.

ಮಾರ್ಗಪರಂಪರೆಯ ಕಾವ್ಯ, ಸತ್ವ, ತತ್ವಮೌಲ್ಯಗಳ ದರ್ಶನವು ಜನಸಮಾನ್ಯನಿಗೆ ಅರಗಿಸಿಕೊಳ್ಳಲಾಗದ ಆಹಾರವಾಗಿತ್ತು. ಮಾರ್ಗಪರಂಪರೆಯ ದಟ್ಟವಾದ ಪ್ರಭಾವವಿದ್ದರೂ ದೇಸಿಯ ಸೊಗಡನ್ನು ಮೈಗೂಡಿಸಿಕೊಳ್ಳುವ ಮನೋವೃತ್ತಿ ಪಂಡಿತ ವರ್ಗಕ್ಕೆ ಮಲಿನವಾಗಿತ್ತು. ಸಂಸ್ಕೃತಭೂಯಿಷ್ಟವಾದ ಪದ್ಯವು ಪಂಡಿತರ ಸೊತ್ತಾಗಿತ್ತು. ಇದಕ್ಕೆ ಹೊರತಾಗಿ ಜನರಾಡುವ ಭಾಷೆಯನ್ನೇ, ಹಾಡಿದರೆ ಪದ್ಯವಾಗುವ ಓದಿದರೆ ಗದ್ಯವಾಗುವ ವಿಶಿಷ್ಟ ಸಾಹಿತ್ಯ ಪ್ರಕಾರವನ್ನು ಸೃಜಿಸಿದರು. ಅದು 'ವಚನ' ಸಾಹಿತ್ಯವಾಯಿತು. 'ವಚನ' ಎಂದರೆ ಪ್ರಮಾಣ, ಪ್ರತಿಜ್ಞೆ, ಭಾಷೆ ಮುಂತಾದ ಮೌಲ್ಯಯುತವಾದ ನವವಾಣಿಯಾಗಿ ಕಂಗೊಳಿಸಿತು. ತಮ್ಮ ದೈನಂದಿನ ಜೀವನದಲ್ಲಿ ಕಂಡುಂಡ ಅನುಭವಗಳನ್ನು ಸರಳವಾಗಿ ಸುಂದರವಾಗಿ ಹೇಳುವವರಿಗೂ ಮತ್ತು ಕೇಳುವವರಿಗೂ ತಕ್ಷಣವೇ ಅರ್ಥೈಸಿಕೊಳ್ಳಬಲ್ಲ ಪ್ರಕಾರವನ್ನು ಕಂಡುಕೊಂಡರು.

ಅಂದಿನ ಪರಿಸ್ಥಿತಿಯಲ್ಲಿ ಪಂಡಿತ ವರ್ಗಗಳಿಂದ ತಿರಸ್ಕಾರ ಹೊಂದಿದರೂ ಅದನ್ನೆ ಪುರಸ್ಕಾರವೆಂದು ಭಾವಿಸಿ, ಸಮಾಜದ ಎಲ್ಲ ವರ್ಗದ ಜನರು ಪುರುಷ-ಸ್ತ್ರೀ ಎನ್ನುವ ಭೇದ ಭಾವವನ್ನು ಕಾಣದೆ ಸರ್ವರೂ ಸಾಹಿತ್ಯ ಕೃಷಿಗೆ ತಮ್ಮನ್ನು ಮೈಗೂಡಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಮಾರ್ಗಕವಿಗಳು ಪದ್ಯವನ್ನು ಬಳಸದೇ ಇರುವ ವಿಷಯವು ಹೇಗೆ ಗದ್ಯವಾಗಿ ಪರಿಣಮಿಸಿತೊ ಹಾಗೆ ಜನರ ಬದುಕಿನ ಬವಣೆಗಳು ಆಸೆ-ಆಕಾಂಕ್ಷೆಗಳು 'ವಚನ'

ರೂಪವಾಗಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಂಡುಕೊಂಡಿತು. ನಮ್ಮ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಾರ್ಗದಿಂದ ದೇಸಿಗೆ ಸಂಕ್ರಮಣ ಹೊಂದಿದ ಯುಗವಾಯಿತು. ಮದ್ಯಕಾಲೀನ ಸಾಹಿತ್ಯದ ವೈಶಿಷ್ಟ್ಯವಿರುವುದೇ 'ವಚನ'ರೂಪದ ಉದಯದಲ್ಲಿ ವಚನ ವಾಙ್ಮಯದ ಉದಯವು 'ಜೀವನ ಧರ್ಮ'ದ ಮೂಲವಾಯಿತು. ತಾವು ಹೇಳುವುದು ಜನಸಾಮಾನ್ಯರಿಗೆ ತಲುಪಬೇಕೆಂಬ ಸದಾಶಯದಿಂದ ಶಿವಶರಣರು ಜನರಾಡುವ ಭಾಷೆಯಲ್ಲಿಯೇ ತಮ್ಮ ಭಾವನೆಗಳನ್ನು ನಿರೂಪಿಸಿದರು. ವಚನದ ಮೂಲ, ಉಗಮದ ಬಗ್ಗೆ ಸಾಕಷ್ಟು ಚರ್ಚೆ, ವಾದ, ವಿವಾದಗಳು ನಡೆದಿವೆ. ತಮಿಳಿನ 'ತೇವಾರಂ' ಎಂಬ ಹಾಡುಗಳೇ ಕನ್ನಡದ ವಚನಗಳ ಮೂಲವೆಂದು ಡಿ.ಎಲ್. ನರಸಿಂಹಾಚಾರ್ಯರು ಹೇಳುತ್ತಾರೆ. ಆದರೆ ಎಂ. ಚಿದಾನಂದಮೂರ್ತಿಯವರು ವಚನಗಳು ಯಾವುದೇ ಹೊರಗಿನ ಮಾದರಿಯನ್ನು ಅನುಸರಿಸಿ ಹಾಗೂ ಅನುಕರಿಸಿದವುಗಳಲ್ಲ. ಬದಲಾಗಿ ಪರಿಸರದ ಒತ್ತಡ ಅಥವಾ ಅಂದಿನ ಅನಿವಾರ್ಯತೆಯಿಂದಾಗಿ ಸಾಮಾನ್ಯ ಜನತೆಗೆ ಬಹಳ ಹತ್ತಿರವಾದ ಮತ್ತು ಪ್ರಿಯವಾದ ಸಾಹಿತ್ಯ ರೂಪವಾಯಿತು. ಶರಣರು ಇದನ್ನು ಬಳಕೆ ಮಾಡಿದ ಮೊದಲಿಗರು ಮತ್ತು ಪ್ರಮುಖರು.

ಪರಿಸರದೊಂದಿಗೆ ಸ್ಪಂದಿಸಿದ ಕ್ರಿಯೆಯ ಫಲಗಳೇ ಶರಣರ ವಚನಗಳು. ಮೂಲತಃ ವಚನಕಾರರ ಉದ್ದೇಶ ಮಾತ್ರ ನವಸಮಾಜದ ನಿರ್ಮಾಣ ಮಾಡುವುದಾಗಿತ್ತು. ಹಾಗಾಗಿ ಇಡೀ ಜನಜೀವನವನ್ನೇ ಕಲಕಿದರು. ಶರಣರು ಜನತೆಗೆ ಆಲೋಚನಾ ಬೀಜವನ್ನು ಬಿತ್ತಿದರು. ಇದು ಜನಸಾಮನ್ಯರಲ್ಲಿ ಆತ್ಮವಿಶ್ವಾಸ ಇಮ್ಮಡಿಗೊಳಿಸುವಂತಾಯಿತು. ದೇವಸ್ಥಾನಗಳ ನಿರಾಕರಣೆ, ಜಾತಿ ದಿಕ್ಕಾರ, ಮೌಢ್ಯಾಚರಣೆಗಳ ದಿಕ್ಕಾರ, ಪ್ರಭುತ್ವಗಳ ದಿಕ್ಕಾರ ಇವು ಹಳಸಿದ ಪರಂಪರೆಗೆ ಸಿಡಿಮದ್ದುಗಳಾಗಿ ಪರಿಣಮಿಸಿದವು. ಇದರಿಂದ ಒಟ್ಟು ವ್ಯವಸ್ಥೆಯು ತನ್ನ ಭದ್ರತೆಯನ್ನು ಸಡಿಲಗೊಳ್ಳುವತ್ತ ಸಾಗಿತು. ಸಮಾಜದಲ್ಲಿ ನವ ಚೈತನ್ಯ ರಂಗೇರಿತು. ಇದರ ಫಲವಾಗಿ ವಿವಿಧ ವರ್ಗದ ಜನರು ಮೇಲು-ಕೀಳೆನ್ನದೆ, ಲಿಂಗತಾರತಮ್ಯವಿಲ್ಲದೆ ತಾವು ಮಾಡುವ ವೃತ್ತಿಯ ಮುಖಾಂತರವೇ ಈ ವಚನ ಪರಂಪರೆಯನ್ನು ಹುಟ್ಟು ಹಾಕುವಲ್ಲಿ ಪ್ರಯೋಜನವಾಯಿತೆಂದು ಹೇಳಬಹುದು. ಒಂದು ವಿಧದಲ್ಲಿ ಸಾಮೂಹಿಕ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪಡೆಯಿತೆಂದರೆ ಅತಿಶಯೋಕ್ತಿಯಲ್ಲ. ಅಧ್ಯಾತ್ಮ, ದೇವರು, ಧರ್ಮ, ನೀತಿ ಮುಂತಾದ ಕಠಿಣ ವಿಷಯಗಳನ್ನು ಸರಳ ಮಾತುಗಳಲ್ಲಿ ನಿರೂಪಿಸಿದರು. ಮಾರ್ಗದವರಿಗೆ ಭಾಷೆಯು ಬರಹದ ಮಾರ್ಗವಾದರೆ 'ದೇಸಿ'ಯರಿಗೆ ಬದುಕನ್ನು ಕಟ್ಟಿಕೊಳ್ಳಲು ಮಾರ್ಗವಾಯಿತು.

ಮಧ್ಯಮ ವರ್ಗದವರು ಜೀವಿತದ ಅನುಕೂಲಕ್ಕೆ ತನ್ನದೇ ಆದ ಕುಲಕಸುಬುಗಳಲ್ಲಿ ನಿರತರಾಗಿದ್ದರು. ಆ ಕಾರ್ಯಗಳಲ್ಲಿ ಮಗ್ನರಾಗಿ ಶ್ರಮಜೀವಿಗಳಾದರು. ದೈಹಿಕ ಶ್ರಮದ ಜೊತೆಗೆ ಮಾನಸಿಕ ನೆಮ್ಮದಿಗಾಗಿ ವಿವಿಧ ವಿಚಾರಗಳನ್ನು, ಅನುಭವಗಳನ್ನು ಹಂಚಿಕೊಳ್ಳಲು ಒಂದು ವೇದಿಕೆ ಅನಿವಾರ್ಯವೂ ಅವಶ್ಯವೂ ಆಯಿತು. ಅದು 'ಅನುಭವ ಮಂಟಪ'ವಾಗಿ ದೇಶದ ನಾನಾ ವರ್ಗದ ಶ್ರಮಿಕ ಬುದ್ಧಿಜೀವಿಗಳು ಒಂದೆಡೆ ಸೇರಿ ಲೌಕಿಕ-ಅಲೌಕಿಕ ವಿಚಾರ ವಿನಿಮಯದ ಕೇಂದ್ರಬಿಂದುವಾಯಿತು. ಅಂತರಂಗದ ಅಭಿಪ್ರಾಯಗಳನ್ನು ಅಭಿವ್ಯಕ್ತಪಡಿಸಲು ಬಹಳ ಉಪಯುಕ್ತವಾಗಿ ಪರಿಣಮಿಸಿತು. ಇದು ಜನತೆಯ ಮೇಲೆ ಗಾಢವಾದ ಪ್ರಭಾವಬೀರಿತು. ಮತ್ತು ಬಹಳ ಹತ್ತಿರವಾಯಿತು. ಸಮಾಜದ ಆರ್ಥಿಕ ಸಾಮಾಜಿಕ ಅಂತಸ್ತುಗಳಿಗಿಂತ ಮನುಷ್ಯರ ಅಂತರಂಗದ ಅರಿವು ಮುಖ್ಯವಾಗಿ ಇದು ಪ್ರಾಥಮಿಕ ಹಂತದ ಅಗತ್ಯವೆನಿಸಿತು. ಇಡೀ ಭಾರತೀಯ ಸಮಾಜದಲ್ಲಿ ಶರಣರು ಪ್ರಾರಂಭಿಸಿದ ಮತ್ತು

ಪ್ರೋತ್ಸಾಹಿಸಿದ ಮಹತ್ತರ ಬದಲಾವಣೆಯ ಹೊಸ ಪ್ರಯತ್ನವಾಯಿತು. ಸ್ವರ್ಗ, ನರಕಗಳ ಕಲ್ಪನೆಗಳನ್ನು ವಾಸ್ತವದಲ್ಲಿ ಕಂಡುಕೊಳ್ಳುವ ಮೌಲ್ಯಗಳನ್ನು ಕಂಡುಕೊಂಡರು. ಇದಕ್ಕೆ 'ಕಾಯಕ' ತತ್ವವನ್ನು ಮೈಗೂಡಿಸಿಕೊಳ್ಳಲು ಸಹಾಯವಾಯಿತು. ವಿವಿಧ ವರ್ಗದ ಜನರು ತಾವು ಮಾಡುವ ಕಾಯಕದಲ್ಲಿಯೇ ಕೈಲಾಸವನ್ನು ಕಾಣುವ ಮನೋಭೂಮಿಕೆಯನ್ನು ಬಿತ್ತಿದರು. ಇದು ದಿನದ ಇಪ್ಪತ್ನಾಲ್ಕು ಗಂಟೆಗಳ ವರೆಗೆ ನಡೆಯುವ ತನುಶುದ್ಧಿ, ಮನಶುದ್ಧಿಯಿಂದ ಕೂಡಿದ ನಿರಂತರ ಪ್ರಕ್ರಿಯೆಗೆ ಒಳಪಡಿಸಿದರು. ತಮ್ಮ ಶ್ರಮದಿಂದ ಬಂದ ಗಳಿಕೆಯನ್ನು ದಾಸೋಹಕ್ಕೆ ನೀಡುವ ಪ್ರವೃತ್ತಿಯು ಅವರ ತನುಮನದಲ್ಲಿ ಕರಗತವಾಯಿತು. ಅನ್ಯ ಮನಸ್ಸನ್ನು ಕಾಣದೆ 'ಸಂಗ್ರಹ' ಗುಣದಿಂದ ದೂರ ಸರಿದರು. ಇದು ಮನುಕುಲಕ್ಕೆ ಮಾದರಿಯಾಯಿತು.

ಹೀಗೆ ನಡುಗನ್ನಡ ಸಾಹಿತ್ಯ ಸಂದರ್ಭದಲ್ಲಿ ಕಾಯಕ, ದಾಸೋಹಕ್ಕೆ ಮಹತ್ವ ನೀಡಿದ್ದರ ಫಲವಾಗಿ 'ವಚನ' ಸಾಹಿತ್ಯ ತನ್ನ ಸ್ವರೂಪವನ್ನು ಹೊಸ ಮೌಲ್ಯಗಳನ್ನು ಸೃಜಿಸುವಲ್ಲಿ ಬಹುಮಹತ್ತರವಾದ ಪಾತ್ರವನ್ನು ನಿರ್ವಹಿಸಿತು. ಎಂದು ಕಾಣಬಹುದು.

**ಆಕರ ಗ್ರಂಥ**


1) ಬಸವಣ್ಣನವರ ವಚನಗಳು – ಸಂ.ಸ.ಸ. ಮಾಳವಾಡ
2) ವಚನಗಳು – ಡಾ.ಎಲ್. ಬಸವರಾಜು
3) ಕನ್ನಡ ಸಾಹಿತ್ಯ ಚರಿತ್ರೆ – ರಂ.ಶ್ರೀ ಮುಗಳಿ
4) ಕನ್ನಡ ಸಾಹಿತ್ಯ ಕೋಶ – ರಾಜಪ್ಪ ದಳವಾಯಿ
5) ವಚನ ರತ್ನತ್ರಯರು – ಎಂ.ಎನ್. ಗಿರಿಜಾಪತಿ